

# ಬದಲಾವಣೆ

ಅಶೀಷ್ ರಾಯಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2024

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು - ಜೆ.ವಿ - ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿವರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada - Change)

# ಬದಲಾವಣೆ

# ಪರಿವಿಡಿ


1. ಬದಲಾವಣೆ—ಒಂದು ಅವಶ್ಯಕವಾದ ಪ್ರಕ್ರಿಯೆ 1

2. ನಮ್ಮ ಉದ್ದೇಶಗಳಲ್ಲಿ ಮತ್ತು ಆಶೆಗಳಲ್ಲಿ ಬದಲಾವಣೆ 5

3. ನಮ್ಮ ಆಲೋಚನೆಗಳಲ್ಲಿ, ವರ್ತನೆಗಳಲ್ಲಿ, ಮಾತುಗಳಲ್ಲಿ ಮತ್ತು ನಡತೆಯಲ್ಲಿ ಬದಲಾವಣೆ 8

4. ಅನಿರೀಕ್ಷಿತ ಬದಲಾವಣೆಗಳಿಗೆ ತೆರೆದವರಾಗಿರುವದು 11

5. ಬದಲಾವಣೆ—ಪ್ರಗತಿಗೆ ಮತ್ತು ವೃದ್ಧಿಗೆ ಅವಶ್ಯಕ 14

6. ಬದಲಾವಣೆಯ ಆತ್ಮನು 15

# 1
# ಬದಲಾವಣೆ–ಒಂದು ಅವಶ್ಯಕವಾದ ಪ್ರಕ್ರಿಯೆ

ಬದಲಾವಣೆ! ನಮ್ಮ ಸುತ್ತಮುತ್ತಲಿರುವ, ಸಂಗತಿಗಳು ಎಡಬಿಡದೆ ಬದಲಾವಣೆಗೊಳ್ಳುತ್ತಿದೆ. ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಪ್ರಪಂಚದಾದ್ಯಂತ ಇತರ ದೊಡ್ಡ ಬದಲಾವಣೆಗಳು ಆಗುತ್ತಿರುವದನ್ನು ನಾವು ನೋಡುತ್ತೇವೆ. ಸಂಗತಿಗಳು ಇರುವ ಹಾಗೆ ಯಾವಾಗಲೂ ಇರುವದಿಲ್ಲ. "ಇಂದು ಪ್ರಪಂಚದಲ್ಲಿ ಒಂದು ನಿರಂತರವಾದ ಸಂಗತಿಯಿದೆ ಮತ್ತು ಅದು ಬದಲಾವಣೆಯಾಗಿದೆ!" ಎಂದು ಹೋಗುವಂತಹ ಒಂದು ಸಾಮಾನ್ಯವಾದ ಹೇಳಿಕೆಯಿದೆ. "ಬದಲಾವಣೆ" ಎಂಬ ಪದವು ಒಂದು ಘಟನೆ ಅಥವಾ ಒಂದು ಪ್ರಕ್ರಿಯೆಯನ್ನು ಸೂಚಿಸುತ್ತದೆ, ಅದು ಸಂಗತಿಗಳು ಪ್ರಸ್ತುತವಾಗಿರುವದಕ್ಕಿಂತ ಭಿನ್ನವಾಗಿರುವಂತೆ ಮಾಡುತ್ತದೆ.

ಬದಲಾವಣೆ ಕ್ರೈಸ್ತರಿಗೂ ಸಹ ಪ್ರಾಮುಖ್ಯವಾದದ್ದಾಗಿದೆ! ನಮ್ಮ ಕ್ರೈಸ್ತಿಯ ಜೀವಿತ ಮಾನಸಾಂತರದೊಂದಿಗೆ ಪ್ರಾರಂಭವಾಯಿತು, ಅದು ಮೂಲಭೂತವಾಗಿ ಪಾಪದಿಂದ ಹಾಗೂ ಸೈತಾನನಿಂದ ಜೀವಿಸುವ ದೇವರ ಕಡೆಗೆ ತಿರುಗುವ ಹೃದಯ ಮತ್ತು ಮನಸ್ಸಿನ ಬದಲಾವಣೆಯಾಗಿದೆ. ಆ ಕ್ಷಣದಲ್ಲಿಯೇ, ದೇವರು ನಮ್ಮನ್ನು ಒಳಗಿನಿಂದ ಬದಲಾಯಿಸಿದನು. ನಾವು ಹೊಸದಾಗಿ ಹುಟ್ಟಿದೇವು! ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾದೆವು. ಕ್ಷಣಾರ್ಧದಲ್ಲಿ, ದೇವರು ನಮ್ಮ ಆತ್ಮಗಳಲ್ಲಿ ಒಂದು ಸೃಜನಶೀಲ ಕೆಲಸವನ್ನು ಮಾಡಿದನು ಅದು ನಮ್ಮನ್ನು ಕತ್ತಲೆಯಿಂದ ಬೆಳಕಿಗೆ ತಂದಿತು, ಸೈತಾನನ ಬಂಧನದಿಂದ ಕ್ರಿಸ್ತನಲ್ಲಿ ಸ್ವತಂತ್ರರಾಗುವಂತೆ ಮಾಡಿತು. ಕ್ರೈಸ್ತಿಯ ಜೀವಿತವು ಎಡಬಿಡದೆ ನಡೆಯುವ ಒಂದು ಬದಲಾವಣೆಯ ಪ್ರಕ್ರಿಯೆಯಾಗಿದೆ. *"ತನ್ನ ಮಗನ ಸ್ವಾರೂಪ್ಯವುಳ್ಳವರಾಗುವದಕ್ಕೆ"* (ರೋಮಾಪುರದವರಿಗೆ 8:29ಆ) ದೇವರು ನಮ್ಮನ್ನು ಮೊದಲೇ ನೇಮಿಸಿದನು. ನಿರಂತರವಾದ ಬದಲಾವಣೆಯ ಪ್ರಕ್ರಿಯೆಯ ಮೂಲಕವಾಗಿ ನಾವು ಯಾವ ರೀತಿಯ ಜನರಾಗಿದ್ದೇವೋ ಅದರಿಂದ ಸಂಪೂರ್ಣವಾಗಿ ಕ್ರಿಸ್ತನ ಸ್ವಾರೂಪ್ಯಕ್ಕೆ ರೂಪಾಂತರಗೊಳ್ಳುತ್ತೇವೆ. ಕರ್ತನು ತಾನೆ ಪರಲೋಕದಿಂದ ತುತ್ತೂರಿ ಧ್ವನಿಯೊಡನೆ ಇಳಿದು ಬರುವಾಗ

*"... ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ... ನಾವು ಮಾರ್ಪಡುವೆವು"* (1 ಕೊರಿಂಥದವರಿಗೆ 15:51,52) ನಾವು ಬದಲಾವಣೆಯ ಆ ಮಹಾ ದಿನಕ್ಕಾಗಿ ಎದುರು ನೋಡುತ್ತಾ ಇದ್ದೇವೆ. ಮರ್ತ್ಯವು ಅಮರತ್ವವನ್ನು ಧರಿಸಿಕೊಳ್ಳುವದು *"ಪ್ರತ್ಯಕ್ಷನಾಗುವಾಗ ನಾವು ಆತನ ಹಾಗಿರುವೆವೆಂದು ಬಲ್ಲೆವು ... ಆತನಿರುವ ಪ್ರಕಾರವೇ ಆತನನ್ನು ನೋಡುವೆವು"* (1 ಯೋಹಾನ 3:2ಆ).

ಕ್ರಿಸ್ತನಲ್ಲಿನ ನಮ್ಮ ಜೀವನವು ತ್ವರಿತ ಬದಲಾವಣೆಯ ಘಟನೆಯೊಂದಿಗೆ ಪ್ರಾರಂಭವಾಯಿತು ಮತ್ತು ಇದು ಬದಲಾವಣೆಯ ಮತ್ತೊಂದು ತ್ವರಿತ ಘಟನೆಯೊಂದಿಗೆ ಕೊನೆಗೊಳ್ಳುತ್ತದೆ. ಹೇಗಿದ್ದರೂ, ಇವೆರಡು ಅಂಶಗಳ ನಡುವೆ ಒಂದು ನಿರಂತರವಾದ ಬದಲಾವಣೆಯ ಪ್ರಕ್ರಿಯೆ ಇದೆ. ಈ ಪುಸ್ತಕವು ಆ ವಿಷಯದ ಮೇಲೆ ನೆಲೆಸಿದೆ ಮತ್ತು ಪ್ರಾಥಮಿಕವಾಗಿ ಪ್ರೇರಣಾತ್ಮಕವಾಗಿದೆ ಹಾಗೂ ಈ ನಿರಂತರ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಮ್ಮನ್ನು ಪ್ರಚೋದಿಸಲು ಉದ್ದೇಶಿಸಿದೆ. ನಮ್ಮ ಜೀವನದಲ್ಲಿ ಬದಲಾವಣೆಯ ಪ್ರಕ್ರಿಯೆಗೆ ಒಳಪಡಬೇಕಾದ ಕ್ಷೇತ್ರಗಳನ್ನು ಸಹ ನಾವು ಪರಿಗಣಿಸುತ್ತೇವೆ.

**2 ಕೊರಿಂಥದವರಿಗೆ 3:18**
**ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ** (ಬದಲಾವಣೆ) **ಆಗುತ್ತೇವೆ.**

ಒಂದು ವೇಳೆ ನಮ್ಮ ದೃಷ್ಟಿಕೋನವು ಕರ್ತನ ಮೇಲೆ ಇದ್ದರೆ, ಆಗ ನಾವು ಆತನ ಸ್ವಾರೂಪ್ಯಕ್ಕೆ ಬದಲಾಗುವದು ಅನಿವಾರ್ಯ ಪರಿಣಾಮವಾಗಿದೆ. ವಾಸ್ತವವಾಗಿ, ನಾವು ಆತನ ಹತ್ತಿರಕ್ಕೆ ಸೆಳೆಯಲ್ಪಡುವಾಗ ಮತ್ತು ಹೆಚ್ಚೆಚ್ಚಾಗಿ ಆತನ ಮಹಿಮೆಯನ್ನು ನಾವು ದೃಷ್ಟಿಸಿ ನೋಡುವಾಗ, ನಮ್ಮ ಜೀವಿತದಲ್ಲಿ ಬದಲಾಗಬೇಕಾದ ಕ್ಷೇತ್ರಗಳನ್ನು ಹೆಚ್ಚೆಚ್ಚಾಗಿ ನಾವು ಗುರುತಿಸಲು ಪ್ರಾರಂಭಿಸುತ್ತೇವೆ. ಮೇಲಿನ ವಚನವು ನಾವು *"ಬದಲಾಯಿಸಲ್ಪಡುತ್ತಿದ್ದೇವೆ"* ಎಂದು ಹೇಳುತ್ತದೆ. (ದಯವಿಟ್ಟು ಗಮನಿಸಿ—ಮುಂದುವರಿದ ವರ್ತಮಾನ ಕಾಲವು ಕ್ರಿಯೆಯು ಪ್ರಗತಿಯಲ್ಲಿದೆ ಎಂದು ಸೂಚಿಸುತ್ತದೆ). ನಾವು ಬದಲಾಯಿಸಲ್ಪಡುತ್ತಿರುವಾಗ, ನಾವು ಮಹಿಮೆಯಿಂದ ಮಹಿಮೆಯ ಕಡೆಗೆ ಪ್ರಗತಿಯಾಗುತ್ತಿದ್ದೇವೆ. ಆದ್ದರಿಂದ ಬದಲಾವಣೆಯು ಒಂದು ಕ್ಷೇತ್ರದಿಂದ

ಮುಂದಿನದ್ದಕ್ಕೆ ಹೋಗಲು ಅಗತ್ಯವಾದ ಪ್ರಕ್ರಿಯೆಯಾಗಿದೆ. ಇದು ಆತ್ಮೀಕ ಬೆಳವಣಿಗೆ ಅಥವಾ ಪ್ರಗತಿಯನ್ನು ತರುತ್ತದೆ. ಬದಲಾವಣೆ ಇಲ್ಲದೆ ಅಲ್ಲಿ ಯಾವುದೇ ಆತ್ಮೀಕ ಬೆಳವಣಿಗೆಯಾಗಲು ಸಾಧ್ಯವಿಲ್ಲ, ಯಾಕೆಂದರೆ ಬೆಳವಣಿಗೆಯು ಬದಲಾವಣೆಯ ಪ್ರಕ್ರಿಯೆಯಾಗಿದೆ. ತನ್ನ ಯಾವುದೇ ಮಕ್ಕಳು ವಿಸ್ತೃತ ಅವಧಿವರೆಗೆ ಅದೇ ಆತ್ಮೀಕ ಸ್ಥಿತಿಯಲ್ಲಿ ಉಳಿಯುವದು ದೇವರು ಬಯಸುವದ್ದಿಲ್ಲ ಎಂದು ನಾವು ನಂಬುತ್ತೇವೆ. ಬದಲಿಗೆ, ನಾವು ಮುಂದೆ ಸಾಗುತ್ತಿರಬೇಕೆಂದು ಆತನು ಬಯಸುತ್ತಾನೆ. ನಾವು ನಿಶ್ಚಲರಾಗಬೇಕೆಂದು ದೇವರು ಬಯಸುವದಿಲ್ಲ.

ನಮ್ಮ ಆತ್ಮೀಕ ಜೀವಿತಗಳ ಬಗ್ಗೆ ಬರುವಾಗ ಬದಲಾವಣೆ ಅಗತ್ಯ ಮಾತ್ರವಲ್ಲ, ಆದರೆ ನಮ್ಮ ಅನುದಿನದ ಅಸ್ತಿತ್ವದ ಪ್ರತಿಯೊಂದು ಅಂಶದಲ್ಲೂ ಅದು ಸ್ಪಷ್ಟವಾಗಿ ಗೋಚರಿಸಬೇಕು. ನಾವು ಬದಲಾವಣೆಯನ್ನು ನಮ್ಮ ವ್ಯಕ್ತಿತ್ವ, ನಡವಳಿಕೆ, ಬುದ್ಧಿಶಕ್ತಿ, ಕೌಶಲ್ಯಗಳು, ಸಾಮರ್ಥ್ಯಗಳು, ಹಣಕಾಸು, ಯೋಜನೆಗಳು, ಗುರಿಗಳು, ಮತ್ತು ಇತರೆಯವುಗಳಲ್ಲಿ ಸ್ವಾಗತಿಸಬೇಕು. ನಮ್ಮ ಜೀವಿತದ ಎಲ್ಲಾ ಕ್ಷೇತ್ರದಲ್ಲಿ *"ಮಹಿಮೆಯಿಂದ ಮಹಿಮೆಗೆ"* ಚಲಿಸಲು ದೃಢವಾದ ಮತ್ತು ಬುದ್ಧಿವಂತ ಪ್ರಯತ್ನಗಳು ಇರಬೇಕು. ದೇವರು ಭೂಮಿಯ ಮೇಲಿನ ನಮ್ಮ ಜೀವನದ ಪ್ರತಿಯೊಂದು ವಿವರಗಳಲ್ಲಿ–ಶಿಕ್ಷಣ, ಭವಿಷ್ಯ, ಕುಟುಂಬ, ವೃತ್ತಿ, ಮತ್ತು ಸೇವೆಯಲ್ಲಿ ಆಸಕ್ತಿ ಹೊಂದಿದ್ದಾನೆ. ಈ ಪ್ರತಿಯೊಂದು ಕ್ಷೇತ್ರಗಳಲ್ಲಿ ಕೆಲಸ ಮಾಡಲು ಯಾವಾಗಲೂ ಅಲ್ಲಿ ಉನ್ನತವಾದ ಮತ್ತು ಉತ್ತಮವಾದ ಸಂಗತಿಗಳಿವೆ.

ಉದಾಹರಣೆಗೆ, ನೀವು ಒಬ್ಬ ಯಶಸ್ವಿಯಾದ ವೈದ್ಯರಾಗಿದ್ದರೆ, ನೀವು ಉತ್ತಮರಾಗಲು ಶ್ರಮಿಸಬಹುದು. ಒಂದು ವೇಳೆ ಚಿಕಿತ್ಸೆಯ ಲಭ್ಯತೆ ಅಥವಾ ಮಾರ್ಗವಿಲ್ಲದವರಿಗೆ ಹೊಸ ವಿಧಾನಗಳ ಮೂಲಕ ಔಷದವನ್ನು ತರಲಿಕ್ಕೆ ಸಹಾಯ ಮಾಡಲು ನೀವು ಆಲೋಚಿಸಬಹುದು. ಮೊದಲು ನಿಮ್ಮ ಯೋಜನೆಯ ಭಾಗವಾಗಿರದ ಕೆಲಸಗಳನ್ನು ಮಾಡುವ ಬಗ್ಗೆ ನೀವು ಆಲೋಚಿಸಬಹುದು. ಒಬ್ಬ ವಿಧ್ಯಾರ್ಥಿಯಾಗಿ, ನಿಮ್ಮ ಜ್ಞಾನವನ್ನು ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸಲು ನೀವು ಪ್ರಯತ್ನಿಸಬಹುದು. ಒಬ್ಬ ಗೃಹಿಣಿಯಾಗಿ, ನೀವು ನಿಮ್ಮ ಕುಟುಂಬಕ್ಕೆ ಒದಗಿಸುವ ಆರೈಕೆ ಮತ್ತು ಆದರಣೆಯ ಗುಣಮಟ್ಟವನ್ನು ಸುಧಾರಿಸಲು ಪ್ರಯತ್ನಿಸಬಹುದು. ಒಬ್ಬ ಸೇವಕನಾಗಿ, ಪ್ರಸಂಗಶಾಸ್ತ್ರ

ಮತ್ತು ಅರ್ಥವಿವರಣಾಶಾಸ್ತ್ರ ಸುಧಾರಿಸಲು ನೀವು ಪ್ರಯತ್ನಿಸಬಹುದು. ಹೇಗಿದ್ದರೂ, ನಾವು "ಬದಲಾಗಲು" ಮನಸ್ಸುಳ್ಳವರಾಗಿದ್ದರೆ ಮಾತ್ರ ಇವುಗಳಲ್ಲಿ ಪ್ರತಿಯೊಂದು ಸಾಧ್ಯವಾಗುತ್ತದೆ. ಮುಂದಿರುವ ಅಧ್ಯಾಯಗಳಲ್ಲಿ, ಬದಲಾವಣೆಯ ಕೆಲವು ಕ್ಷೇತ್ರಗಳನ್ನು ನಾವು ಪರಿಗಣಿಸುತ್ತೇವೆ.

# 2
# ನಮ್ಮ ಉದ್ದೇಶಗಳಲ್ಲಿ ಮತ್ತು ಆಶೆಗಳಲ್ಲಿ ಬದಲಾವಣೆ

**ಕೀರ್ತನೆಗಳು 51:10**

**ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು;**
**ನನಗೆ** (ಸರಿಯಾದ) **ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು.**

ನಮ್ಮ ಆಂತರ್ಯದ ಉದ್ದೇಶಗಳು ಮತ್ತು ಆಶೆಗಳು ಅತೀ ಪ್ರಾಮುಖ್ಯವಾದವುಗಳಾಗಿವೆ. ಬಹಳ ಆತ್ಮೀಕವಾದ ಮತ್ತು ಅರ್ಥಗರ್ಭಿತವಾದ ಒಬ್ಬ ಕ್ರೈಸ್ತನು ಸಹ ಕೆಲವೊಂದು ವಿಷಯಗಳಲ್ಲಿ ಕೆಟ್ಟ ಉದ್ದೇಶಗಳು ಮತ್ತು ಆಶೆಗಳನ್ನು ಹೊಂದಿರಲು ಸಾಧ್ಯವೆಂಬದನ್ನು ನಾವು ಗ್ರಹಿಸಬೇಕು. ಅಂತಹ ದುಷ್ಟತೆಗೆ ವಿರುದ್ಧವಾಗಿ ನಾವು ಯಾರೂ ಆಕಸ್ಮಿಕವಾಗಿ ವಿರೋಧಿಸುವದಿಲ್ಲ. ಬದಲಿಗೆ, ಇವುಗಳಿಗೆ ವಿರುದ್ಧವಾಗಿ ನಾವು ಎಡಬಿಡದೆ ಎಚ್ಚರವಾಗಿರಬೇಕು. *"ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು"* (ಜ್ಞಾನೋಕ್ತಿಗಳು 4:23) ಎಂದು ಕರ್ತನು ಉಪದೇಶಿಸುತ್ತಾನೆ. ತಪ್ಪು ಉದ್ದೇಶಗಳಿಗೆ ಬಂಧಿಯಾಗದಂತೆ ನಮ್ಮ ಹೃದಯಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ. ನಾವು ನಮ್ಮ ಸ್ವಂತ ಹೃದಯಗಳನ್ನು ಹುಡುಕಿದರೆ ಮತ್ತು ಅಂತಹ ಉದ್ದೇಶಗಳು ಹಾಗೂ ಆಶೆಗಳು ನಿಜವಾಗಿಯೂ ಇವೆ ಎಂದು ಗುರುತಿಸಿದರೆ ಏನೂ ತಪ್ಪಿಲ್ಲ. ಇದು ಬದಲಾವಣೆಯ ಕಡೆಗೆ ಪ್ರಾಮುಖ್ಯವಾದ ಮತ್ತು ಮೊದಲನೇ ಹೆಜ್ಜೆಯಾಗಿದೆ. ನಮ್ಮನ್ನೇ ನಾವು ಪರೀಕ್ಷಿಸಿಕೊಳ್ಳಬೇಕೆಂದು ಸತ್ಯವೇದವು ಪದೇ ಪದೇ ಹೇಳುತ್ತದೆ.

**1 ಕೊರಿಂಥದವರಿಗೆ 11:28**

**ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ.**

**1 ಕೊರಿಂಥದವರಿಗೆ 11:31**

**ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೊಳಗಾಗುವದಿಲ್ಲ.**

**2 ಕೊರಿಂಥದವರಿಗೆ 13:5**

**ಕ್ರಿಸ್ತನಂಬಿಕೆಯಲ್ಲಿ ಇದ್ದೀರೋ ಇಲ್ಲವೋ ಎಂದು ನಿಮ್ಮನ್ನು ನೀವೇ ಪರೀಕ್ಷಿಸಿಕೊಳ್ಳಿರಿ, ನಿಮ್ಮನ್ನು ಪರಿಶೋಧಿಸಿಕೊಳ್ಳಿರಿ. ಏನು, ಯೇಸು ಕ್ರಿಸ್ತನು ನಿಮ್ಮಲ್ಲಿದ್ದಾನೆಂಬದು ನಿಮ್ಮನ್ನು ಕುರಿತು ನಿಮಗೆ ಚೆನ್ನಾಗಿ ತಿಳಿಯುವದಿಲ್ಲವೋ? ಆತನು ನಿಮ್ಮಲ್ಲಿಲ್ಲದಿದ್ದರೆ ನೀವು ಅಯೋಗ್ಯರೇ.**

## ಸೇವೆಯಲ್ಲಿ ಉದ್ದೇಶಗಳು

ಕೆಟ್ಟ ಉದ್ದೇಶಗಳು ಮತ್ತು ಆಶೆಗಳನ್ನು ಗುರುತಿಸಿದ ಮೇಲೆ, ನಾವು ಅವುಗಳನ್ನು ಅರಿಕೆ ಮಾಡಬೇಕು ಮತ್ತು ಕರ್ತನು ನಮ್ಮನ್ನು ಬದಲಾಯಿಸುವಂತೆ ಕೇಳಿಕೊಳ್ಳಬೇಕು. ದಾವೀದನು ಪ್ರಾರ್ಥಿಸಿದಂತೆ ಪ್ರಾರ್ಥಿಸಿ, *"ದೇವರೇ, ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನ ಪಡಿಸು"* (ಕೀರ್ತನೆಗಳು 51:10). ವಯಕ್ತಿಕವಾಗಿ ನಮ್ಮ ಸ್ವಂತ ಜೀವಿತಗಳಲ್ಲಿ, ಜನರ ಸೇವೆಯನ್ನು ನಾವು ಮಾಡುವಾಗ, ಅನೇಕ ವಿಭಿನ್ನ ಕ್ಷೇತ್ರಗಳಲ್ಲಿ ತಪ್ಪಾದ ಉದ್ದೇಶಗಳಿಗೆ ವಿರುದ್ಧವಾಗಿ ನಮ್ಮನ್ನೇ ನಾವು ಎಡಬಿಡದೆ ಕಾಪಾಡಿಕೊಳ್ಳಬೇಕು. "ನಾನು ಇದನ್ನು ಏಕೆ ಮಾಡುತ್ತಿದ್ದೇನೆ? ನನ್ನ ಉದ್ದೇಶವೇನು? ನನ್ನ ಮನಃಪೂರ್ವಕವಾದ ಆಶೆಗಳೇನು?" ಎಂದು ನಮ್ಮನ್ನೇ ನಾವು ಕೇಳಿಕೊಳ್ಳಬೇಕು. ಉದಾಹರಣೆಗೆ, ಯಾವೂದಾದರು ಒಂದು ನಿರ್ಧಿಷ್ಟ ಸ್ಥಳದಲ್ಲಿ ಸೇವೆಗಾಗಿ ನಮ್ಮನ್ನು ಆಮಂತ್ರಿಸಿದ್ದರೆ, ಅಲ್ಲಿಗೆ ಹೋಗಲು ಕರ್ತನು ನಮ್ಮ ಹೃದಯಗಳನ್ನು ಸಿದ್ಧಪಡಿಸಲು ಮತ್ತು ಶುದ್ಧವಾದ ಉದ್ದೇಶವನ್ನು ಕೊಡುವಂತೆ ನಾವು ಕೇಳಿಕೊಳ್ಳಬೇಕು. ಅವರು ನಮ್ಮ ಸೇವೆಗೆ ಕೊಡಬಹುದಾದಂತಹ ಕಾಣಿಕೆಗಳ ಮೇಲೆ ಕೇಂದ್ರಿಕರಿಸದಂತೆ ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಬೇಕು. ನಾವು ದೇವರ ಪ್ರೀತಿ ಮತ್ತು ಶಕ್ತಿಯ ಅಸಾಧಾರಣ ಪ್ರದರ್ಶನಗಳನ್ನು ಬಯಸುವಾಗ "ದೇವರ ಅತ್ಯಂತ ಅಭಿಷಕ್ತ ಸೇವಕ" ಎಂದು ಗುರುತಿಸಲ್ಪಡಬೇಕೆಂಬ ದುರುದ್ದೇಶದಿಂದ ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಬೇಕು. ನಾವು ಸೇವೆಯಲ್ಲಿ ಬೆಳೆಯಲು ಪ್ರಯತ್ನಿಸುತ್ತಿರುವಾಗ ನಮ್ಮ ಸ್ವಂತ "ಸೇವೆ" ಅಥವಾ "ರಾಜ್ಯ" ವನ್ನು ಪ್ರಚಾರ ಮಾಡಲು ಬಯಸದಂತೆ ನಮ್ಮ ಹೃದಯಗಳನ್ನು ಕಾಪಾಡಿಕೊಳ್ಳಬೇಕು. ಇದು "ದೇವರ ಕೆಲಸ," "ನಮ್ಮ ಕೆಲಸವಲ್ಲ" ಹಾಗೂ ಇದು "ದೇವರ ರಾಜ್ಯ," "ನಮ್ಮ ರಾಜ್ಯವಲ್ಲಾ" ಎಂದು ನಿರಂತರವಾಗಿ ನಮಗೆ ನಾವು ನೆನಪಿಸಿಕೊಳ್ಳಬೇಕು.

ನಮ್ಮ ಉದ್ದೇಶಗಳು ಮತ್ತು ಆಶೆಗಳು ನಮ್ಮ ಜೀವನದಲ್ಲಿನ ಅನೇಕ ವಿಷಯಗಳನ್ನು ನಿರ್ಧರಿಸುವದರಿಂದ ಮತ್ತು ಪ್ರಭಾವ ಬೀರುವದರಿಂದ ಸೇವೆಯಲ್ಲಿ ಜಾಗರೂಕತೆಯ ಪ್ರಾಮುಖ್ಯತೆಯನ್ನು ನಾನು ಒತ್ತಿ ಹೇಳಿದ್ದೇನೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ದೇವರು ನಮ್ಮ ಬಾಹ್ಯ ತೋರಿಕೆಗಳನ್ನು ಮೀರಿ ನೋಡುತ್ತಾನೆ. *"ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ"* (1 ಸಮುವೇಲನು 16:7ಆ). ಆಂತರ್ಯದ ಮನುಷ್ಯನಲ್ಲಿ ದೇವರು ಸತ್ಯವನ್ನು ಬಯಸುತ್ತಾನೆ (ಕೀರ್ತನೆಗಳು 51:6). ನಿಮ್ಮ ಉದ್ದೇಶಗಳು ಮತ್ತು ಆಶೆಗಳ ಮೇಲೆ ನಿರಂತರವಾಗಿ ನಿಗಾ ಇರಿಸಿ. ಅವು ಸರಿಯಾಗಿಲ್ಲದಿದ್ದರೆ ಕರ್ತನ ಬಳಿಗೆ ಹೋಗಿ ನನ್ನನ್ನು **ಬ-ದ-ಲಾ-ಯಿ-ಸು**!! ಎಂದು ಕೇಳಿಕೊಳ್ಳಿರಿ.

# 3

# ನಮ್ಮ ಆಲೋಚನೆಗಳಲ್ಲಿ, ವರ್ತನೆಗಳಲ್ಲಿ, ಮಾತುಗಳಲ್ಲಿ ಮತ್ತು ನಡತೆಯಲ್ಲಿ ಬದಲಾವಣೆ

**ರೋಮಾಪುರದವರಿಗೆ 12:2ಅ**

**ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ ...**

**ಎಫೆಸದವರಿಗೆ 4:23**

**ನೀವು ನಿಮ್ಮ ಆಂತರ್ಯದಲ್ಲಿ ಹೊಸಬರಾಗಿ ನೂತನ** (ನಡುವಳಿಕೆ) **ಸ್ವಭಾವವನ್ನು ಧರಿಸಿಕೊಳ್ಳಿರಿ.**

**1 ತಿಮೊಥೆಯನಿಗೆ 4:12**

**ಯೌವನಸ್ಥನೆಂದು ನಿನ್ನನ್ನು ಅಸಡ್ಡೆಮಾಡುವದಕ್ಕೆ ಯಾರಿಗೂ ಅವಕಾಶಕೊಡದೆ ನಂಬುವವರಿಗೆ ನಡೆ, ನುಡಿ, ಪ್ರೀತಿ, ನಂಬಿಕೆ, ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು.**

ಕರ್ತನು ನಮ್ಮ ಆಲೋಚನೆಗಳಲ್ಲಿ ಮತ್ತು ವರ್ತನೆಗಳಲ್ಲಿ ಒಂದು ಬದಲಾವಣೆಯನ್ನು ನೋಡಲು ಬಯಸುತ್ತಾನೆ. ನಮ್ಮ ದೃಷ್ಟಿಕೋನ, ವರ್ತನೆಗಳಲ್ಲಿ ಮತ್ತು ನಾವು ಯೋ ಚಿಸುವ ರೀತಿಯಲ್ಲಿ ಬದಲಾವಣೆಯಾಗಬೇಕು ಎಂದು *"ನಿಮ್ಮ ಮನಸ್ಸು ನೂತನಗೊಳ್ಳಬೇಕೆಂದು"* (ರೋಮಾಪುರದವರಿಗೆ 12:2) ರಲ್ಲಿ ಸೂಚಿಸುತ್ತದೆ. ಇದಕ್ಕೆ ಹಲವು ಆಯಾಮಗಳಿವೆ. ನಾವು "ಲೌಕಿಕ ಆಲೋಚನೆಗಳು" ಅಥವಾ "ಲೌಕಿಕ" ವರ್ತನೆಗಳನ್ನು ಹೊಂದುವದರಿಂದ ಬದಲಾಗಬೇಕು ಮತ್ತು ದೇವರ ಆಲೋಚನೆಗಳು ಮತ್ತು ವರ್ತನೆಗಳನ್ನು ತೆಗೆದುಕೊಳ್ಳಬೇಕು. ನಾವು "ಕೀಳಾದ" ಆಲೋಚನೆಯನ್ನು ತೊಡೆದುಹಾಕಬೇಕು ಮತ್ತು ದೇವರ ವಾಕ್ಯದ ಹಾಗೂ ನಂಬಿಕೆಯ ದೃಷ್ಟಿಕೋನದಿಂದ ಸಾಮರಸ್ಯದಲ್ಲಿ ನಮ್ಮ ಆಲೋಚನಾ ಗುಣಮಟ್ಟವನ್ನು ಹೆಚ್ಚಿಸಬೇಕು. ನಮ್ಮಲ್ಲಿ ಕೆಲವರು ನಿರಾಶಾವಾದವನ್ನು, "ಮಾಡಲು ಆಗುವದಿಲ್ಲ" ಎಂಬ ನಕರಾತ್ಮಕ ವಿಧಾನವನ್ನು ತೊಡೆದುಹಾಕಬೇಕು ಮತ್ತು ದೇವರಲ್ಲಿ ಸರಳವಾದ ನಂಬಿಕೆಯ ಮೂಲಕ ಲಭ್ಯವಿರುವ ದೊಡ್ಡ ಸಾಧ್ಯತೆಗಳನ್ನು ನೋಡಲು ಪ್ರಾರಂಭಿಸಬೇಕು.

ನಮ್ಮಲ್ಲಿ ಕೆಲವರು ಕೆಲಸಗಳನ್ನು ಮಾಡುವ "ಹಳೇಯ ಮಾರ್ಗದಲ್ಲಿ" ಎಷ್ಟು ಬೇರೂರಿದ್ದಾರೆಂದರೆ, ದೇವರು ಸ್ವತಃ ಮಾಡಲು ಬಯಸುವ "ತಾಜಾ ಮತ್ತು ಹೊಸದನ್ನು" ಸ್ವೀಕರಿಸಲು ನಾವು ಸಿದ್ಧರಿಲ್ಲ. ನಮ್ಮ ಧಾರ್ಮಿಕ ಪದ್ಧತಿಗಳು ಮತ್ತು ಸಂಪ್ರದಾಯಗಳು ನಮ್ಮ ಆಲೋಚನೆಯಲ್ಲಿ ನಮ್ಮನ್ನು ಎಷ್ಟು ಬಂಧಿಸಿವೆ ಎಂದರೆ ನಮಗೆ ಕಲಿಸಿದ ರೀತಿಯಲ್ಲಿ ಹೊರತುಪಡಿಸಿ ಬೇರೆ ರೀತಿಯಲ್ಲೂ ದೇವರು ಕಾರ್ಯ ಮಾಡಲು ಸಾಧ್ಯವಿಲ್ಲ ಎಂದು ನಾವು ಭಾವಿಸುತ್ತೇವೆ.

ಇನ್ನು ಇತರರಿಗೆ ತುಂಬಾ ಚಿಕ್ಕದಾದ ಕನಸ್ಸುಗಳಿವೆ, ಕಿರಿದಾದ ಆಕಾಂಕ್ಷೆಗಳಿವೆ, ದರ್ಶನಗಳು ತುಂಬಾ ಮಂದವಾಗಿದೆ ಎಂದರೆ ಅವರು ಈ ಕ್ಷೇತ್ರಗಳಲ್ಲಿ ಬದಲಾವಣೆಯನ್ನು ನೋಡುವದು ಅವಶ್ಯವಿದೆ. ನಾವು ದೊಡ್ಡ ಕನಸನ್ನು ಕಾಣಬೇಕು, ದೇವರಿಗಾಗಿ ಬಹಳಷ್ಟನ್ನು ಸಾಧಿಸಲು ಹಾತೊರೆಯಬೇಕು, ಮತ್ತು ಪ್ರಪಂಚದಲ್ಲಿ ಬದಲಾವಣೆಯನ್ನು ತರುವಂತಹ ದರ್ಶನಗಳನ್ನು ಹೊಂದಿರಬೇಕು. ನಮ್ಮಲ್ಲಿ ಕೆಲವರು–ವೈಫಲ್ಯ, ಸೋಲು, ನಿರುತ್ಸಾಹ ಅಥವಾ ವಿಪತ್ತಿನ ಅನುಭವಗಳ ಕಾರಣದಿಂದಾಗಿ–ನಿರಾಸಕ್ತಿ, ಆಶಾರಹಿತತೆ, ಹತಾಶೆ ಸ್ಥಿತಿಯಲ್ಲಿ ಬಿದ್ದಿದ್ದೇವೆ. ಅಲ್ಲಿ ಯಾವುದೇ ಚಾಲನೆ, ಪ್ರೇರಣೆ, ಪ್ರಗತಿ ಮತ್ತು ವೃದ್ಧಿಗಾಗಿ ಶ್ರಮಿಸದೆ ಇರುವದು ತೋರಿಬರುತ್ತದೆ. ನಾವು ಸ್ವಲ್ಪಮಟ್ಟಿಗೆ ನಮ್ಮ ಸಹಕಾರವನ್ನು!! ಆತನಿಗೆ ಕೊಡಲು ಮನಸ್ಸುಳ್ಳವರಾಗಿದ್ದರೆ ದೇವರು ಅವೆಲ್ಲವುಗಳನ್ನು ಬದಲಿಸುತ್ತಾನೆ. ಕೆಲವರು ಸರಳ ಸೋಮಾರಿಗಳಾಗಿರಬಹುದು, ವಿಷಯಗಳನ್ನು ಹಗುರವಾಗಿ ತೆಗೆದುಕೊಳ್ಳುವದು, ಹಾಗೂ ಬಳಲಿದಂತೆ ನಟಿಸಬಹುದು. ನಮ್ಮ ವರ್ತನೆಯಲ್ಲಿ!! ಒಂದು ತೀವ್ರ ಬದಲಾವಣೆಯ ಅಗತ್ಯವಿದೆ. ಕೆಲವರು ಶಾಶ್ವತ ಅಲಸ್ಯಗಾರರಿದ್ದಾರೆ ಮತ್ತು ಅವರು ಅದನ್ನು ಬದಲಾಯಿಸಬೇಕು. ಕೆಲವರು "ಆಯೋಜಕರು" ಮತ್ತು "ಮಾತನಾಡುವವರು" ಇದ್ದಾರೆ ಆದರೆ ತಮ್ಮ "ಕೈಗಳನ್ನು ನೇಗಿಲಿಗೆ ಹಾಕುವದಿಲ್ಲ" ಇದು ಕೂಡ ಬದಲಾಗಬೇಕಾಗಿದೆ. ಕೆಲವರು ಭಯದಲ್ಲಿ, ಗರ್ವದಲ್ಲಿ, ಕಹಿತನದಲ್ಲಿ ಅಥವಾ ದೇವರಿಗೆ ಇಷ್ಟವಾಗದ ಇತರ ಗುಣಲಕ್ಷಣಗಳಲ್ಲಿ ಬಂಧಿಸಲ್ಪಟ್ಟಿದ್ದಾರೆ ಮತ್ತು ಆತನು ಅದರಲ್ಲಿ ಬದಲಾವಣೆಯನ್ನು ನೋಡ ಬಯಸುತ್ತಾನೆ. ದೇವರು ನಮ್ಮ ಮಾತುಗಳು ಹಾಗೂ ನಡತೆಯಲ್ಲಿ ನಮ್ಮನ್ನು ಉನ್ನತ ಮಟ್ಟಕ್ಕೆ ಏರಿಸಲು ಬಯಸುತ್ತಾನೆ. ನಮ್ಮ ಮಾತು ಮತ್ತು ನಡುವಳಿಕೆಯು ಒಬ್ಬ ವಿಶ್ವಾಸಿಗೆ ಸರಿಹೊಂದುವಂತಿರಬೇಕು.

ವೈಯಕ್ತಿಕವಾಗಿ, ನಮ್ಮ ಸ್ವಂತ ಜೀವಿತಗಳಲ್ಲಿ, ಸರಿಯಾಗಿಲ್ಲದ ಆಲೋಚನೆಗಳು ಅಥವಾ ವರ್ತನೆಗಳ ಬಗ್ಗೆ ಅರಿವು ಹೊಂದಿದಾಗ, ನಾವು ದೇವರ ಬಳಿಗೆ ಹೋಗಬೇಕು, ಅವುಗಳನ್ನು ಆತನ ಮುಂದೆ ಅರಿಕೆ ಮಾಡಬೇಕು ಮತ್ತು ಆತನು ನಮ್ಮನ್ನು ಬದಲಾಯಿಸುವಂತೆ ಪ್ರಾರ್ಥಿಸಬೇಕು. ಕರ್ತನ ಸಂಗಡ ಅನೇಕ ವರ್ಷಗಳು ನಡೆದ ಮೇಲೂ ನಮ್ಮ ಜೀವಿತಗಳಲ್ಲಿ ಬದಲಾಗಬೇಕಾದ ಕ್ಷೇತ್ರಗಳನ್ನು ನಾವು ಇನ್ನೂ ಗುರುತಿಸುತ್ತೇವೆ. ನಿಮ್ಮ ಸ್ವಂತ ಜೀವಿತದಲ್ಲಿ ದೇವರ ಬಳಿಗೆ ತರಲು ಬಯಸುವ ವರ್ತನೆಗಳು ಮತ್ತು ಆಲೋಚನಾ ಮಾದರಿಗಳನ್ನು ಗುರುತಿಸಲು ನೀವು ಬಯಸುವಿರಾ ಹಾಗೂ “ಕರ್ತನೆ ನನ್ನ ಜೀವಿತದಲ್ಲಿ ಇದು ಬದಲಾಗುವದನ್ನು ನೋಡಲು ಬಯಸುತ್ತೇನೆ” ಎಂದು ಹೇಳುವಿರಾ?

# 4
# ಅನಿರೀಕ್ಷಿತ ಬದಲಾವಣೆಗಳಿಗೆ ತೆರೆದವರಾಗಿರುವದು

**ಯೋಹಾನ 3:8**

**ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು.**

ಆತ್ಮದಲ್ಲಿನ ಜನನವು ಎಲ್ಲವನ್ನೂ ಸಂಪೂರ್ಣವಾಗಿ ವಿವರಿಸಲಾಗದ ಜೀವನಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಕೆಲವು ಸಂಗತಿಗಳಿಗೆ ಒಳಗಾಗಬೇಕು ಮತ್ತು ಅನುಭವಿಸಬೇಕು. ಕರ್ತನಾದ ಯೇಸು ಆತ್ಮನಿಂದ ತರಲ್ಪಟ್ಟ ನೂತನ ಜನ್ಮವನ್ನು ತನಗೆ ಬೇಕಾದ ಕಡೆಗೆ ಬೀಸುವ ಗಾಳಿಗೆ ಸಮಾನಾಂತರಗೊಳಿಸಿದನು. ನಾವು ಅದನ್ನು ಕೇವಲ ಅನುಭವಿಸುತ್ತೇವೆ. ಅದರ ನಿರ್ಧಿಷ್ಟವಾದ ಉಗಮ ಅಥವಾ ತಲುಪುವ ಸ್ಥಳ ನಮಗೆ ಗೊತ್ತಿಲ್ಲ. ಅದೇ ರೀತಿಯಲ್ಲಿ, ಪವಿತ್ರಾತ್ಮನ ಅನೇಕ ಕಾರ್ಯಗಳು ಸಂಪೂರ್ಣವಾಗಿ ವಿವರಿಸಲ್ಪಡಲಾಗುವದಿಲ್ಲ. ಆತನು ಕಾರ್ಯಗತಗೊಳಿಸಿದ್ದನ್ನು ಮಾತ್ರ ಅನುಭವಿಸುತ್ತೇವೆ ಮತ್ತು ತಿಳಿದುಕೊಳ್ಳುತ್ತೇವೆ. ಕರ್ತನು ಕೆಲವೊಮ್ಮೆ, ನಮಗೆ ಅನಿರೀಕ್ಷಿತವಾದ ಘಟನೆಗಳನ್ನು ಮತ್ತು ಸನ್ನಿವೇಶಗಳನ್ನು ನಮ್ಮ ಜೀವಿತದಲ್ಲಿ ಆಯೋಜಿಸಬಹುದು. ನಾವು ಅಂತಹ ಸಂಗತಿಗಳನ್ನು ಎದುರಿಸುತ್ತೇವೆ ಎಂಬ ಯಾವುದೇ ಪೂರ್ವ ಜ್ಞಾನ ನಮಗಿಲ್ಲ. ಅವುಗಳು ನಮ್ಮ ಯೋಜನೆಗಳ ಭಾಗವಾಗಿರಲಿಲ್ಲ. ಹೇಗಿದ್ದರೂ, ಮಾಡಬೇಕಾದ ಬುದ್ಧಿವಂತ ವಿಷಯವೇನೆಂದರೆ ಕರ್ತನಿಗೆ ಒಳಗಾಗುವದು ಮತ್ತು “ಗಾಳಿ ಬೀಸುವ ಕಡೆಗೆ ಹೋಗುವದು.” ನಮ್ಮ ಜೀವಿತದಲ್ಲಿ ಕರ್ತನು ತೆಗೆದುಕೊಂಡು ಬರುವ ಅನಿರೀಕ್ಷಿತ ಬದಲಾವಣೆಗಳಿಗೆ ತೆರೆದವರಾಗಿರುವದಕ್ಕೆ ಕಲಿಯುವದು ಬಹಳ ಪ್ರಾಮುಖ್ಯವಾದದ್ದಾಗಿದೆ. ಇವುಗಳು ನಮ್ಮ ಜೀವನದಲ್ಲಿ ತಿರುವಿನ ಅಂಶಗಳಾಗಬಹುದು.

## ನಮ್ಮ ಸೇವೆಯಲ್ಲಿ ಬದಲಾವಣೆಗಳು

ಆತನು ನಮಗಾಗಿ ಕಾಯ್ದಿರಿಸಿದವುಗಳಿಗೆ ನಡೆಸಲು ಹೇಗೆ ಅನಿರೀಕ್ಷಿತ ಬದಲಾವಣೆಗಳನ್ನು ದೇವರು ಉಪಯೋಗಿಸಿದನು ಎಂಬ ಅನೇಕ ನಿದರ್ಶನಗಳನ್ನು ನಾನು ಮತ್ತು ಎಮಿ(ನನ್ನ ಹೆಂಡತಿ), ಜ್ಞಾಪಿಸಿಕೊಳ್ಳುವವರಾಗಿದ್ದೇವೆ. ಸುಮಾರು 1995 ರಲ್ಲಿ, ನನ್ನ ತಂದೆ ಯುಎಸ್ ವ್ಯಾಪಾರ ಪ್ರವಾಸದಲ್ಲಿದ್ದರು. ಅವರು ಒಂದು ರಾತ್ರಿಗಾಗಿ ನಿಲ್ಲಲು ಮತ್ತು ನಾನು ವಾಸಿಸುತ್ತಿದ್ದ ನ್ಯೂ ಜೆರ್ಸಿಯಲ್ಲಿರುವ ನ್ಯೂ ಬ್ರನ್ಸ್ ವಿಕ್ ನಲ್ಲಿ ನನ್ನನ್ನು ಭೇಟಿ ಮಾಡಲು ನಿರ್ಧರಿಸಿದರು. ಅವರು ಒಂದು ಶನಿವಾರ ಬಂದರು ಮತ್ತು ಮರುದಿನ ಸಂಜೆ ಹೊರಡಲಿದ್ದರು. ನನ್ನ ತಂದೆ ಯಾವಾಗಲೂ ಆಫ್ರಿಕನ್-ಅಮೆರಿಕನ್ ಸಭೆಗೆ ಭೇಟಿ ನೀಡಲು ಬಯಸಿದ್ದರು ಏಕೆಂದರೆ ಅವರ ಹಾಡುಗಾರಿಕೆ ಮತ್ತು ಆರಾಧನೆ ಶೈಲಿಯನ್ನು ಅವರು ಅನುಭವಿಸಲು ಬಯಸಿದ್ದರು. ಒಂದು ಆಫ್ರಿಕನ್-ಅಮೆರಿಕನ್ ಸಭೆ ಹತ್ತಿರದಲ್ಲಿತ್ತು ಮತ್ತು ಹಾಗಾಗಿ ನಾವು ಭಾನುವಾರ ಬೆಳಿಗ್ಗೆ ಅಲ್ಲಿ ನಿಂತೆವು. ನಾನು ಹಿಂದೆದೂ ಆ ರೀತಿಯ ರೋಮಾಂಚಕ, ಸುಗಮ ಗಾಯನವನ್ನು ನೋಡಿರಲಿಲ್ಲ ಅಥವಾ ಅನುಭವಿಸಿರಲಿಲ್ಲ. ಅದು ತುಂಬಾ ಜೋರಾಗಿತ್ತು, ಬಹುತೇಕ ಕಿವುಡಾಗುವಂತಿತ್ತು, ಮತ್ತು ಕಟ್ಟಡವು ಕೆಳಗೆ ಬೀಳುವಂತೆ ತೋರುತ್ತಿತ್ತು! ಕನಿಷ್ಠ ಅದು ನನಗೆ ಆ ರೀತಿಯಲ್ಲಿ ಕಾಣಿಸಿಕೊಂಡಿತು! ಆ ಸಮಯದವರೆಗೆ, ನಾನು ಕೆಲಸ ಮಾಡುತ್ತಿದ್ದೆ ಮತ್ತು ವಿಶ್ವವಿದ್ಯಾನಿಲಯದಲ್ಲಿ ಕೊರಿಯನ್ ಅಮೇರಿಕನ್ ಸಹೋದರರು ಮತ್ತು ಸಹೋದರಿಯರೊಂದಿಗೆ ನಿಕಟ ಅನ್ಯೂನ್ಯತೆ ಹೊಂದಿದ್ದೆ. ನಾವು ಸ್ತುತಿಯಲ್ಲಿ ಸ್ವಾತಂತ್ರ್ಯವನ್ನು ಆನಂದಿಸಿದೆವು, ಆದರೂ ನಾನು ಅಲ್ಲಿ ಕಂಡಂತೆ ಏನೂ ಇರಲಿಲ್ಲ. ಆಗ ನನ್ನ ಮನಸ್ಸಿನಲ್ಲಿ ಸಾವಿರ ಆಲೋಚನೆಗಳು ಓಡಿದವು. ಆರಾಧನೆಯಲ್ಲಿ ಅಂತಹ ಸ್ವಾತಂತ್ರ್ಯ ಸರಿಯಾದದ್ದು ಎಂದು ನನ್ನೊಳಗೆ ಆಳವಾಗಿ ತಿಳಿದಿತ್ತು. ಕರ್ತನಿಗೆ ಸ್ತುತಿ ಮತ್ತು ಆರಾಧನೆಯನ್ನು ಸ್ವಾತಂತ್ರ್ಯವಾಗಿ ವ್ಯಕ್ತಪಡಿಸಬೇಕೆಂದು ನಾನು ಯಾವಾಗಲೂ ಬಯಸಿದ್ದೆನು. ಆದರೆ ಈ ಆಫ್ರಿಕನ್-ಅಮೆರಿಕನ್ ಸಭೆಯಲ್ಲಿ ಏನು ನಡೆಯುತ್ತಾ ಇತ್ತೋ, ಅದಕ್ಕೆ ನಾನು ಇಟ್ಟಿಗೆ ಗೋಡೆಗಿಂತ ಗಟ್ಟಿಯಾಗಿದ್ದೆನು. ಆ ದಿನದ ಕೊನೆಯ ಭಾಗದಲ್ಲಿ ನಾನು ಒಂಟಿಯಾಗಿರುವಾಗ, ನಾನು ಬಹಳ ಗೊಂದಲಕ್ಕೆ ಒಳಗಾಗಿದ್ದಂತೆ ತೋರುತ್ತಿತ್ತು. ನನ್ನೊಳಗಿನ ಒಂದು ಭಾಗ, “ಕರ್ತನೆ ಮತ್ತೆ ಅಲ್ಲಿಗೆ ನಾನು ಹಿಂದಿರುಗಿ ಹೋಗಲು ಬಯಸುವದಿಲ್ಲ. ನಾನು

ಎಂದಿಗೂ ಅವರಂತಾಗಲು ಸಾಧ್ಯವಿಲ್ಲ. ಮತ್ತು ಅಲ್ಲಿನ ಶಬ್ಧವನ್ನು ನಾನು ಸಹಿಸಿಕೊಳ್ಳಲು ಆಗುವದಿಲ್ಲ" ಎಂದು ಹೇಳಿತು. ನನ್ನ ಮತ್ತೊಂದು ಭಾಗ, "ಕರ್ತನೆ ಅವರ ಬಳಿಯಲ್ಲಿರುವದು ನನಗೆ ಬೇಕು–ನಿನ್ನನ್ನು ಆರಾಧಿಸಲು ಆ ವಿಧವಾದ ಸ್ವಾತಂತ್ರ" ಎಂದು ಹೇಳಿತು. ಸಂಕ್ಷಿಪ್ತವಾಗಿ ಹೇಳುವದಾದರೆ, ಅಲ್ಲಿಗೆ ನಾನು ಹಿಂತಿರುಗಿ ಹೋದೆ ಮತ್ತು ಎಮಿ ನನ್ನನ್ನು ಸೇರಿಕೊಂಡಾಗ, ನಾವು ಒಟ್ಟಿಗೆ ಅಲ್ಲಿಗೆ ಹಿಂದಿರುಗಿದೆವು. ಸ್ವಲ್ಪ ಸಮಯದೊಳಗಾಗಿ, ಆ ಸಭೆಯಲ್ಲಿ ಸೇವೆ ಮಾಡುವ ಅವಕಾಶಗಳು ನನಗೆ ಕೊಡಲಾಯಿತು ಮತ್ತು ಪ್ರತಿ ಬುದವಾರ ರಾತ್ರಿ ನಾವು ಅದನ್ನು ಮಾಡಿದೆವು. ಅಂತಹ ಅದ್ಭುತ ಅಫ್ರಿಕನ್-ಅಮೆರಿಕನ್ ಸಹೋದರ ಸಹೋದರಿಯರನ್ನು ನಾವು ಅಲ್ಲಿ ಭೇಟಿಯಾಗಲು ಸಾಧ್ಯವಾಯಿತು. ಅಲ್ಲಿಗೆ ಭೇಟಿ ಕೊಡುತ್ತಿದ್ದ ಸ್ಪಾನಿಷ್ ಮಾತನಾಡುತ್ತಿದ್ದ ದಂಪತಿಗಳಾದ ಮಾನುವೆಲ್ ಮತ್ತು ತಾನಿಯರವರನ್ನು ನಾವು ಸಹ ಭೇಟಿ ಮಾಡಿದೆವು. ನಂತರ, ಅವರು ಸ್ಥಾಪಿಸಿದ್ದ ಹಿಸ್ಪಾನಿಕ್ ಸಭೆಯಲ್ಲಿ ಸೇವೆ ಮಾಡಲು ನಮ್ಮನ್ನು ಆಮಂತ್ರಿಸಿದರು. ಶೀಘ್ರದಲ್ಲೇ, ನಾವು ಹಿಸ್ಪಾನಿಕ್ ಸಭೆಯ ಜೀವನದಲ್ಲಿ ಹೆಚ್ಚಿನದನ್ನು ಹಂಚಿಕೊಳ್ಳಲು ಪ್ರಾರಂಭಿಸಿದೆವು. ಮಾನುವೆಲ್ ಮತ್ತು ತಾನಿಯ ವಾರಕ್ಕೊಮ್ಮೆ ನಮ್ಮೊಂದಿಗೆ ದೇವರ ವಾಕ್ಯದ ಅಧ್ಯಯನಕ್ಕಾಗಿ ಸಮಯವನ್ನು ಕಳೆಯುತ್ತಿದ್ದರು. ಹಿಸ್ಪಾನಿಕ್ ಸಭೆಯಲ್ಲಿ ಎಮಿಯವರು ಸಂಗೀತ ಸೇವೆಯಲ್ಲಿ ಸಹಾಯ ಮಾಡಿದರು ಮತ್ತು ಅವರ ಸಹಾಯದಿಂದ ನಾವು 1996 ರಲ್ಲಿ ಸೇವೆಯ ಸಮಯಕ್ಕಾಗಿ ಇಕ್ವೇಡಾರ್ ಗೆ ಪ್ರಯಾಣ ಬೆಳೆಸಿದೆವು!

ನ್ಯೂ ಬ್ರನ್ಸ್ ವಿಕ್!! ನಲ್ಲಿ ನನ್ನ ತಂದೆಯ ಒಂದು ರಾತ್ರಿ ನಿಲುಗಡೆಗೆ ಸರಣಿ ಪ್ರತಿಕ್ರಿಯೆಯಾಗಿ ಬಂದ ಎಲ್ಲವನ್ನು ನೋಡಿ. ಅನಿರೀಕ್ಷಿತ? ಅತ್ಯಂತ ಖಚಿತವಾಗಿ!! ನಾವು ಅದನ್ನು ಯೋಜಿಸಿದ್ದೇವಾ? ಖಚಿತವಾಗಿ ಇಲ್ಲ!! ಆತ್ಮನ ಗಾಳಿಯು ಎಲ್ಲಿ ಬೀಸುತ್ತಿತ್ತೊ ಅಲ್ಲಿ ಹೋಗಲು ನಾವು ಕಲಿತೆವು. ಆಫ್ರಿಕನ್-ಅಮೆರಿಕನ್ ಅಥವಾ ಹಿಸ್ಪಾನಿಕ್ ಸಮುದಾಯಗಳಿಗೆ ಸೇವೆ ಮಾಡುತ್ತೇವೆ ಎಂದು ನಾವು ಎಂದಿಗೂ ಊಹಿಸಿರಲಿಲ್ಲ. ಆತನು ಎಲ್ಲಿ ಬೀಸಲು ಇಚ್ಚೆಸುತ್ತಾನೋ, ನಾವು ಅಲ್ಲಿಗೆ ಹೋಗುತ್ತೇವೆ!! ದೇವರು ನಿಮ್ಮ ಜೀವಿತದಲ್ಲಿ ತರಲು ಬಯಸುವ ಅನಿರೀಕ್ಷಿತ ಬದಲಾವಣೆಗಳಿಗೆ ತೆರೆದವರಾಗಿರ್ರಿ ಮತ್ತು ಸಿದ್ಧರಾಗಿರ್ರಿ.

# 5

# ಬದಲಾವಣೆ–ಪ್ರಗತಿಗೆ ಮತ್ತು ವೃದ್ಧಿಗೆ ಅವಶ್ಯಕ

**ಯೋಹಾನ 12:24**

**ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಸತ್ತರೆ ಬಹಳ ಫಲಕೊಡುವದು.**

ನಾವು ಮಹಿಮೆಯಿಂದ ಮಹಿಮೆಗೆ "ಬದಲಾಗಿದ್ದೇವೆ." ಆದಕಾರಣ ಇಂದು ನಾವು ಅನುಭವಿಸುವ ಮಹಿಮೆಯ ಮಟ್ಟದಿಂದ ಮುಂದಿನದಕ್ಕೆ ಸಾಗಬೇಕಾದರೆ, ನಾವು ಮೊದಲು ಬದಲಾಗಬೇಕು. ನಮ್ಮನ್ನು ನಿಶ್ಚಲರನ್ನಾಗಿ ಮತ್ತು ನಮ್ಮ ಪ್ರಗತಿಗೆ ಅಡ್ಡಿಯನ್ನುಂಟು ಮಾಡುವ ಸಂಗತಿಗಳು–ಅದು ನಮ್ಮ ಉದ್ದೇಶಗಳು, ವರ್ತನೆಗಳು, ನಡವಳಿಕೆ, ಅಥವಾ ಮಾತುಗಳಾಗಿರಬಹುದು–ಬದಲಾಗಲೇ ಬೇಕು. ನಾವು ಅವುಗಳು ಏನಾಗಿದೆಯೋ ಅದನ್ನು ಅರಿಕೆ ಮಾಡಬೇಕು ಹಾಗೂ ನಾವು ಎದ್ದೇಳಬೇಕು ಮತ್ತು ದೇವರ ಸಹಾಯದಿಂದ ನಾವು ಅವುಗಳು ಬದಲಾಗುವದನ್ನು ನೋಡಬೇಕಾಗಿದೆ. ನಾವು ಇಂದು ಎಲ್ಲಿದ್ದೇವೆ ಎಂಬದನ್ನು ಆ ಏಕೈಕ *"ಗೋಧಿ ಧಾನ್ಯ"* ದಿಂದ ಸಂಕೇತಿಸಲಾಗುತ್ತಿದೆ ಎಂದು ಪರಿಗಣಿಸಬಹುದು. ನಾವು *"ಹೆಚ್ಚು ಧಾನ್ಯ"* ಆಗಿ ಬೆಳೆಯುವ ಸ್ಥಿತಿಗೆ ಹೋಗಬೇಕಾದರೆ ನಾವು ಮೊದಲು *"ನೆಲಕ್ಕೆ ಬೀಳಬೇಕು," "ಸಾಯಬೇಕು"* ಮತ್ತು ನಂತರ *"ಹೆಚ್ಚು ಧಾನ್ಯವನ್ನು ಉತ್ಪಾದಿಸಬೇಕು."* ನಮ್ಮಲ್ಲಾಗುವ ಬದಲಾವಣೆಯ ಪ್ರಕ್ರಿಯೆಯನ್ನು ಇದು ಸಂಕೇತಿಸುತ್ತದೆ. ನಾವು ಮೊದಲು ನೆಲಕ್ಕೆ ಬೀಳಬೇಕು ಮತ್ತು ಅದಕ್ಕೆ ನಮ್ರತೆ ಬೇಕು. ನಾವು ಬದಲಾಗಬೇಕೆಂಬ ವಾಸ್ತವಾಂಶವನ್ನು ಒಪ್ಪಿಕೊಳ್ಳಲು ನಮ್ಮ ಕಡೆಯಿಂದ ನಮ್ರತೆಯ ಅಗತ್ಯವಿರುತ್ತದೆ. ನಾವು ಸ್ವಾರ್ಥಕ್ಕೆ ಸಾಯಬೇಕು. ಒಂದೊಂದು ಸಲ ಇದು ನೋವಿನ ಪ್ರಕ್ರಿಯೆಯಾಗಿರಬಹುದು. ನಂತರ ನಾವು ಮಹಿಮೆಯ ಮುಂದಿನ ಹಂತಕ್ಕೆ ಏರಿಸಲ್ಪಡುತ್ತೇವೆ, ಹೀಗಾಗಿ ಪ್ರಗತಿ ಮತ್ತು ವೃದ್ಧಿಯನ್ನು ಅನುಭವಿಸುತ್ತೇವೆ.

# 6

# ಬದಲಾವಣೆಯ ಆತ್ಮನು

**ಆದಿಕಾಂಡ 1:1-3**

**[1]ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು.**

**[2] ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು; ಆದಿಸಾಗರದ ಮೇಲೆ ಕತ್ತಲಿತ್ತು; ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು.**

**[3] ಆಗ ದೇವರು - ಬೆಳಕಾಗಲಿ ಅನ್ನಲು ಬೆಳಕಾಯಿತು.**

ಕರ್ತನ ಆತ್ಮನು ನಮ್ಮನ್ನು ಮಹಿಮೆಯಿಂದ ಮಹಿಮೆಗೆ ಬದಲಾಯಿಸುತ್ತಾನೆ. ಪವಿತ್ರಾತ್ಮನು ಬದಲಾವಣೆಯ ಪ್ರತಿನಿಧಿಯಾಗಿದ್ದಾನೆ. ಭೂಮಿಯು ಕ್ರಮವಿಲ್ಲದೆಯೂ, ಬರಿದಾಗಿಯೂ ಹಾಗೂ ಕತ್ತಲಾಗಿತ್ತು. ಆದರೂ ಇನ್ನೂ, ದೇವರ ಆತ್ಮನು ಜಲಸಮೂಹಗಳ ಮೇಲೆ ಚಲಿಸುತ್ತಾ ಇದ್ದನು. *"ಬೆಳಕು ಉಂಟಾಗಲಿ"* (ಆದಿಕಾಂಡ 1:3) ಎಂದು ದೇವರು ವಾಕ್ಯವನ್ನು ನುಡಿದನು ಮತ್ತು ಬಲವುಳ್ಳ ದೇವರ ಆತ್ಮನು ಕತ್ತಲೆಯ ಮಧ್ಯದಲ್ಲಿ ಬೆಳಕನ್ನು ತಂದನು. ಆ ಸೃಜನಾತ್ಮಕ ಮತ್ತು ಪುನಶ್ಚೈತನ್ಯಕಾರಿ ಮಾತುಗಳನ್ನು ಹೇಳಲು ದೇವರು ಸಿದ್ಧವಾಗಿರುವ ಸಮಯದಲ್ಲಿ ಈ ಕ್ರಮವಿಲ್ಲದ, ಕತ್ತಲೆಯ ಮತ್ತು ಬರಿದಾದ ಭೂಮಿಯ ಮೇಲೆ ದೇವರ ಆತ್ಮನು ಆವರಿಸುತ್ತಾ ಇದ್ದನು ಎಂಬದು ಬಹಳ ಗಮನಾರ್ಹವಾಗಿದೆ. ಪವಿತ್ರಾತ್ಮನು ಬದಲಾವಣೆಯ ಆತ್ಮನು ಎಂದು ನಮಗೆ ಮನವರಿಕೆಯಾಗಿದೆ. ಬದಲಾವಣೆ ಮತ್ತು ಪರಿವರ್ತನೆಯನ್ನು ತರುವವನು ಆತನೊಬ್ಬನೆ. ಭೂಮಿಯ ಮುಖಪುಟವು ಪುನಃಸ್ಥಾಪಿಸಲ್ಪಟ್ಟಾಗ ಆತನು ಅದನ್ನು ದೊಡ್ಡ ಪ್ರಮಾಣದಲ್ಲಿ ಮಾಡಿದನು (ಆದಿಕಾಂಡ 1). ಹಾಗಾದರೆ, ದೇವರ ಮಹಿಮೆಯನ್ನು ನಮ್ಮಲ್ಲಿ ತುಂಬಿಸಿ ಮತ್ತು ನಮ್ಮನ್ನು ರೂಪಾಂತರಗೊಳಿಸಿ, ನಾವು ಸಹ ಆತನ ದೃಷ್ಟಿಯಲ್ಲಿ ಒಳ್ಳೆಯವರಾಗುವಂತೆ ಆತನು ಇನ್ನು ಎಷ್ಟೋ ಹೆಚ್ಚು ಕೆಲಸ ನಮ್ಮಲ್ಲಿ ಮಾಡಬಲ್ಲನೆಂದು ನಾವು ನಿರೀಕ್ಷಿಸಬಹುದು. ನಾವು ಆತನಿಗೆ ಒಪ್ಪಿಸುವ ಮಟ್ಟಿಗೆ ಮಾತ್ರ ಆತನು ನಮ್ಮಲ್ಲಿ ಕೆಲಸ ಮಾಡುತ್ತಾನೆ. ಪ್ರವಿತ್ರಾತ್ಮನಿಗೆ ನಿಮ್ಮ ಹೃದಯವನ್ನು ತೆರೆಯಿರಿ. ನಿಮ್ಮನ್ನೇ ನೀವು ಆತನಿಗೆ ಪ್ರಸ್ತುತಪಡಿಸಿರಿ ಮತ್ತು ಆತನು ನಿಮ್ಮನ್ನು ಬದಲಾಯಿಸುವಂತೆ ಕೇಳಿಕೊಳ್ಳಿರಿ. ನಿಮ್ಮ

ಜೀವನದಲ್ಲಿ ಬದಲಾಯಿಸಬೇಕಾದ ಕೆಲವು ಕ್ಷೇತ್ರಗಳೊಂದಿಗೆ ವ್ಯವಹರಿಸಲು ನಿಮಗೆ ಸಹಾಯ ಮಾಡುವಂತೆ ಆತನಲ್ಲಿ ಕೇಳಿಕೊಳ್ಳಿರಿ.

## ದೇವರ ವಾಕ್ಯವು ಬದಲಾವಣೆಯನ್ನು ಉಂಟುಮಾಡುತ್ತದೆ

ದೇವರ ಸೃಜನಾತ್ಮಕ ಮತ್ತು ಪುನಶ್ಚೈತನ್ಯಕಾರಿ ಕಾರ್ಯದಲ್ಲಿ, ಪವಿತ್ರಾತ್ಮನು ಭೂಮಿಯ ಮೇಲೆ ಚಲಿಸಿದಷ್ಟೆ ಅಲ್ಲ ಆದರೆ ಕತ್ತಲೆ ಮತ್ತು ಶೂನ್ಯತೆಯ (ಆದಿಕಾಂಡ 1) ಮೇಲೆ ದೇವರ ವಾಕ್ಯ ಸಹ ಮಾತನಾಡಲಾಯಿತು. ಹಾಗಿದ್ದರೆ, ನಮ್ಮ ಜೀವಿತದಲ್ಲಿ ಪವಿತ್ರಾತ್ಮನು ಮತ್ತು ದೇವರ ವಾಕ್ಯವು ಒಟ್ಟಾಗಿ ಸೇರಿ ಬದಲಾವಣೆಯನ್ನು ತರುತ್ತದೆ. ನಿಮ್ಮ ಹೃದಯ ಮತ್ತು ಮನಸ್ಸನ್ನು ದೇವರ ವಾಕ್ಯಕ್ಕೆ ಬಹಿರಂಗಪಡಿಸಿರಿ. ಅದನ್ನು ನೀವೇ ಓದಿ ಮತ್ತು ಧ್ಯಾನಿಸಿ ಹಾಗೂ ದೇವರ ವಾಕ್ಯವು ನಿಮ್ಮ ಜೀವಿತದಲ್ಲಿ ತನ್ನ ರೂಪಾಂತರಗೊಳಿಸುವ ಶಕ್ತಿಯನ್ನು ಬಿಡುಗಡೆ ಮಾಡಲು ಪ್ರಾರಂಭಿಸುತ್ತದೆ.

# ಒಂದು ಪ್ರಾರ್ಥನೆ

ಕರ್ತನೆ, ನನ್ನನ್ನು ಬದಲಾಯಿಸು!

*ಪ್ರೀತಿಯ ತಂದೆ,*

*ಯೇಸುವಿನ ನಾಮದಲ್ಲಿ ನಾನು ನಿನ್ನ ಬಳಿ ಬರುತ್ತೇನೆ. ಕರ್ತನೆ, ನನ್ನ ಜೀವಿತದಲ್ಲಿ ಬದಲಾಗಬೇಕಾದ ಕೆಲವು ಸಂಗತಿಗಳನ್ನು, ನಾನು ನೋಡುತ್ತೇನೆ. ಕರ್ತನೆ, ನಿನ್ನ ವಾಕ್ಯದ ಬಲದಿಂದಲೂ ಮತ್ತು ನಿನ್ನ ಪವಿತ್ರಾತ್ಮನಿಂದಲೂ ನನ್ನನ್ನು ಬದಲಾಯಿಸು. ನಾನಿರುವ ಸ್ಥಳದಿಂದ ನೀನು ಬಯಸುವ ಸ್ಥಳದ ಕಡೆಗೆ ಸಾಗಲು ನಾನು ಬಯಸುತ್ತೇನೆ. ನಾನು ಏನಾಗಬೇಕೆಂದು ನೀನು ಬಯಸುತ್ತಿಯೋ ಅದೆಲ್ಲ ನಾನಾಗಲು ಬಯಸುತ್ತೇನೆ. ನನಗಾಗಿ ನೀನು ಸಿದ್ಧ ಮಾಡಿಟ್ಟಿರುವ ಎಲ್ಲವನ್ನು ಸ್ವೀಕರಿಸಲು ನಾನು ಬಯಸುತ್ತೇನೆ. ಕರ್ತನೆ, ನನ್ನ ಹೃದಯ ಮತ್ತು ಮನಸ್ಸನ್ನು ಬದಲಾಯಿಸು. ನನ್ನ ಉದ್ದೇಶಗಳನ್ನು, ನನ್ನ ವರ್ತನೆಗಳನ್ನು, ನನ್ನ ಮಾತುಗಳನ್ನು ಹಾಗೂ ನಡವಳಿಕೆಯನ್ನು ಬದಲಾಯಿಸು. ದೇವರ ಸಂಗತಿಗಳಲ್ಲಿ ಪ್ರಗತಿಯಾಗುವದಕ್ಕೆ ಮತ್ತು ವೃದ್ಧಿಯಾಗುವದಕ್ಕೆ ಅಡ್ಡಿಪಡಿಸುವ ಎಲ್ಲಾ ಸಂಗತಿಗಳನ್ನು ತೊಡೆದುಹಾಕಲು ನನಗೆ ಸಹಾಯ ಮಾಡು.*

ಆಮೆನ್.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ" ಎಂದು ಹೇಳುತ್ತದೆ*** **(ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ - ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."* (ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"* (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

| | |
|---|---|
| **ಹದಿಹರೆಯದವರು** | **ವರ್ತನೆಯ ಅಸ್ತವ್ಯಸ್ತತೆಗಳು** |
| **ವಯಕ್ತಿಕ ಹೊಂದಾಣಿಕೆಗಳು** | **ವ್ಯಕ್ತಿತ್ವ ಅಸ್ತವ್ಯಸ್ತತೆಗಳು** |
| **ಸಂಭಂದಿತ ಸವಾಲುಗಳು** | **ಮಾನಸಿಕ/ಭಾವನಾತ್ಮಕ ಸಮಸ್ಯೆಗಳು** |
| **ಶೈಕ್ಷಣಿಕ ಕಡಿಮೆ ಸಾಧನೆ** | **ಒತ್ತಡ/ಆಘಾತ** |
| **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು** | **ಮಧುಪಾನ/ಮಾದಕವಸ್ತು ದುರುಪಯೋಗ** |
| **ಕುಟುಂಬ/ದಂಪತಿಗಳು: ವಿವಾಹಪೂರ್ವ, ವೈವಾಹಿಕ** | **ಆತ್ಮೀಕ ಸಮಸ್ಯೆಗಳು** |
| **ಪೋಷಕರು/ಮಕ್ಕಳು/ಒಡಹುಟ್ಟಿದವರು /ಗೆಳೆಯರು** | **ಜೀವನ ತರಬೇತಿ** |

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ: +91-80-25452617** ಅಥವಾ ಟೋಲ್ - ಫ್ರೀ (ಭಾರತದೊಳಗೆ) **1-800-300-00998**
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**Account Name:** All Peoples Church
**Account Number:** 50200068829058
**IFSC Code:** HDFC0004367
**Bank:** HDFC Bank, 7M/308 80 Ft Road, HRBR Layout, Kalyan Nagar, Bengaluru- 560043, Karnataka

***ದಯವಿಟ್ಟು ಗಮನಿಸಿ:*** *ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* ***apcwo.org/give***.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!


**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**

DOWNLOAD THE FREE APP!

*Search for*
"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

**apcbiblecollege.org**

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ನಮ್ಮ ಕ್ರೈಸ್ತಿಯ ಜೀವಿತ ಮಾನಸಾಂತರದೊಂದಿಗೆ ಪ್ರಾರಂಭವಾಯಿತು, ಅದು ಮೂಲಭೂತವಾಗಿ ಪಾಪದಿಂದ ಹಾಗೂ ಸೈತಾನನಿಂದ ಜೀವಿಸುವ ದೇವರ ಕಡೆಗೆ ತಿರುಗುವ ಹೃದಯ ಮತ್ತು ಮನಸ್ಸಿನ ಬದಲಾವಣೆಯಾಗಿದೆ. ಆ ಕ್ಷಣದಲ್ಲಿಯೇ, ದೇವರು ನಮ್ಮನ್ನು ಒಳಗಿನಿಂದ ಬದಲಾಯಿಸಿದನು. ನಾವು ಹೊಸದಾಗಿ ಹುಟ್ಟಿದೇವು! ನಾವು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾದೆವು. ಕ್ಷಣಾರ್ಧದಲ್ಲಿ, ದೇವರು ನಮ್ಮ ಆತ್ಮಗಳಲ್ಲಿ ಒಂದು ಸೃಜನಶೀಲ ಕೆಲಸವನ್ನು ಮಾಡಿದನು ಅದು ನಮ್ಮನ್ನು ಕತ್ತಲೆಯಿಂದ ಬೆಳಕಿಗೆ ತಂದಿತು, ಸೈತಾನನ ಬಂಧನದಿಂದ ಕ್ರಿಸ್ತನಲ್ಲಿ ಸ್ವತಂತ್ರರಾಗುವಂತೆ ಮಾಡಿತು. ಕ್ರಿಸ್ತನಲ್ಲಿನ ನಮ್ಮ ಜೀವನವು ತ್ವರಿತ ಬದಲಾವಣೆಯ ಘಟನೆಯೊಂದಿಗೆ ಪ್ರಾರಂಭವಾಯಿತು ಮತ್ತು ಇದು ಬದಲಾವಣೆಯ ಮತ್ತೊಂದು ತ್ವರಿತ ಘಟನೆಯೊಂದಿಗೆ ಕೊನೆಗೊಳ್ಳುತ್ತದೆ. ಹೇಗಿದ್ದರೂ, ಇವೆರಡು ಅಂಶಗಳ ನಡುವೆ ಒಂದು ನಿರಂತರವಾದ ಬದಲಾವಣೆಯ ಪ್ರಕ್ರಿಯೆ ಇದೆ. ಈ ಪುಸ್ತಕವು ಆ ವಿಷಯದ ಮೇಲೆ ನೆಲೆಸಿದೆ ಮತ್ತು ಪ್ರಾಥಮಿಕವಾಗಿ ಪ್ರೇರಣಾತ್ಮಕವಾಗಿದೆ ಹಾಗೂ ಈ ನಿರಂತರ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ನಮ್ಮನ್ನು ಪ್ರಚೋದಿಸಲು ಉದ್ದೇಶಿಸಿದೆ.


**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org